ರಾಜಾನುಕುಂಟೆ ಗ್ರಾಮ ಪಂಚಾಯಿತಿ ಕಾರ್ಯಾಲಯ
ರಾಜಾನುಕುಂಟೆ ಅಂಚೆ, ಹೆಸರಘಟ್ಟ ಹೋಬಳಿ,
ಯಲಹಂಕ ತಾಲ್ಲೂಕು – 560 064.
E-mail :rajanukuntegp@gmail.com

RAJANUKUNTE GRAMA PANCHAYAT OFFICE
RAJANUKUNTE POST, HESARAGHATTA
HOBLI, YELAHANKA TALAK – 560 064.
E-mail :rajaanukunte.bnrth.bngu@gmail.com

ಸಂಖ್ಯೆ: ರಾಗ್ರಾಪಂ/ಸಿ.ಆರ್/179/2023–24

ದಿನಾಂಕ: 18/12/2023

ರವರಿಗೆ,
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,
ದೊಡ್ಡಬಳ್ಳಾಪುರ.

ಮಾನ್ಯರೇ;

ವಿಷಯ:– ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ–2 ಹೋಬಳಿ, ಅದ್ದೆವಿಶ್ವನಾಥಪುರ ಗ್ರಾಮದ ಸರ್ವೆ ನಂ 103/2 ರ ಪೈಕಿ 1 ಎಕರೆ 1 ಗುಂಟೆ, 103/4/ ರ ಪೈಕಿ 1 ಎಕರೆ 12 ಗುಂಟೆ, 103/6 ರಲ್ಲಿ 8.50 ಗುಂಟೆ, 103/7 ರಲ್ಲಿ 12 ಗುಂಟೆ, 103/8 ರ ಪೈಕಿ 2.5 ಗುಂಟೆ, 103/9 (ಹ.ಸ.ನಂ. 103/6) ರಲ್ಲಿ 8.5 ಗುಂಟೆ, 104/2 (ಹ.ಸ.ನಂ 104) ರಲ್ಲಿ 1 ಎಕರೆ 34 ಗುಂಟೆ (6 ಗುಂಟೆ 'ಬಿ' ಖರಾಬು ಹೊರತು ಪಡಿಸಿ), 105/1 ರಲ್ಲಿ 25 ಗುಂಟೆ, 105/2 ರ ಪೈಕಿ 26 ಗುಂಟೆ ಮತ್ತು 105/7 (ಹ.ಸ.ನಂ.105/3) ರ ಪೈಕಿ 25 ಗುಂಟೆ ಒಟ್ಟು 6 ಎಕರೆ 34.5 ಗುಂಟೆ ಅಥವಾ 2777.17 ಚ.ಮೀ ವಿಸ್ತೀರ್ಣದ ಜಮೀನಿಗೆ 'ವಸತಿ' ಉದ್ದೇಶದ ನಿವೇಶನಗಳಿಗೆ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ.

ಉಲ್ಲೇಖ:– ತಮ್ಮ ಕಛೇರಿ ಪತ್ರದ ಸಂಖ್ಯೆ: DPA/TP/DP/05/2022–23/1138 ದಿನಾಂಕ: 04/11/2023

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರದಲ್ಲಿ ತಿಳಿಸಿದಂತೆ ಸರ್ವೆ ನಂಬರಿನ ಜಮೀನಿನಲ್ಲಿ "ವಸತಿ" ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ. ಈ ಸಂಬಂಧ ಯೋಜನಾ ಪ್ರಾಧಿಕಾರದ 24ನೇ ಸಭೆಯ ವಿಷಯ ಸಂಖ್ಯೆ 24.44 ರಲ್ಲಿ ಚರ್ಚಿಸಿ, ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಗಿದ್ದು, ಸದರಿ ಉದ್ದೇಶಿತ ಪ್ರಸಾಪಿತ ಜಮೀನುಗಳ ಪೈಕಿ ಸರ್ವೆ ನಂ. 104/2 ರ ಜಮೀನಿನಲ್ಲಿ ಹಾದು ಹೋಗಿರುವ ಹಾಲಿ 9.00 ಮೀಟರ್ ಅಗಲದ ರಸ್ತೆಯನ್ನು 12.0 ಮೀಟರ್ ಅಗಲಕ್ಕೆ ವಿಸ್ತರಿಸಲು ಪ್ರಸ್ತಾಪಿಸಲಾಗಿದ್ದು, ರಸ್ತೆ ಅಗಲೀಕರಣಕ್ಕಾಗಿ 165.41 ಚ.ಮೀ ಜಾಗವನ್ನು ಭೂ ಉಪಯೋಗ ವಿಶ್ಲೇಷಣೆಯಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ರಸ್ತೆ ಅಗಲೀಕರಣಕ್ಕಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಸ್ಥಳೀಯ ಸಂಸ್ಥೆಯಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ರಾಜಾನುಕುಂಟೆ ಗ್ರಾಮ ಪಂಚಾಯಿತಿ ರವರಿಗೆ ಮುಫತ್ತಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರ ಪಡೆದುಕೊಂಡಿದ್ದು, ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ತಮ್ಮ ಅವಗಾಹನೆಗೆ ಸಲ್ಲಿಸಿದೆ.

"ವಂದನೆಗಳೊಂದಿಗೆ",

ತಮ್ಮ ವಿಶ್ವಾಸಿ,

ಪಂಚಾಯಿತಿ ಅಭಿವೃಧಿ ಅಧಿಕಾರಿ
ರಾಜಾನುಕುಂಟೆ ಗ್ರಾಮ ಪಂಚಾಯಿತಿ
ಯಲಹಂಕ ತಾಲ್ಲೂಕು

ಲಗತ್ತು:–

1) ನೋಂದಾಯಿತ ಪರಿತ್ಯಾಜನಾ ಪತ್ರಗಳು ಸಂಖ್ಯೆ: BYP-1-13138-2023-24 ದಿನಾಂಕ: 15/12/2023.